5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 03.06.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 2 ಪಿ. ಡಬ್ಲ್ಯೂ:3

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಮ್ಮ |
| ಗಂಡನ ಹೆಸರು | ಶಿವಣ್ಣ |
| ವಯಸ್ಸು | 50 ವರ್ಷ |
| ಉದ್ಯೋಗ | ಗೃಹಿಣಿ ಮತ್ತು ರೇಷ್ಮೆ ಕೆಲಸ |
| ವಾಸ | ನೆಟಕಲ್ಲು, ಮಳವಳ್ಳಿ ತಾಲ್ಲೂಕು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ.1 ಸಿದ್ದರಾಜು ಗೊತ್ತು. ಫ್ರಾಸಾ.2 -ಶಿವಣ್ಣ ನನ್ನ ಗಂಡ. 30 ವರ್ಷಗಳಿಂದ ನಾನು ನೆಟಕಲ್ಲು ಗ್ರಾಮದಲ್ಲಿ ವಾಸವಿದ್ದೇನೆ. ನಮ್ಮ ಮನೆಯಿಂದ ಫ್ರಾಸಾ.1 ರವರ ಮನೆ, 8 ಮನೆಗಳ ನಂತರದಲ್ಲಿದೆ. ಫ್ರಾಸಾ.1ರವರ ತಂದೆ ಸಿದ್ದೇಗೌಡರವರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಸಿದ್ದೇಗೌಡ ಎಂದು ಗುರುತಿಸಿರುತ್ತಾರೆ.

2. ಮಹದೇವಮ್ಮ, ಆರೋಪಿ ಸಿದ್ದೇಗೌಡರವರ ಹೆಂಡತಿ. 2 ವರ್ಷಗಳ ಹಿಂದೇ ಸದರಿ ಮಹದೇವಮ್ಮ ತೀರಿಕೊಂಡಿರುತ್ತಾರೆ. ಸಂಜೆ 7.00 ಗಂಟೆ ಸಮಯದಲ್ಲಿ, ನಾನು ಮನೆಯಲ್ಲಿ ಇದ್ದಾಗ, ಸಿದ್ದೇಗೌಡ ರವರ ಮನೆಯ ಕಡೆಯಿಂದ ಶಬ್ದ ಕೇಳಿಸಿತು. ನಾನು ನೋಡಿದಾಗ, ಸಿದ್ದೇಗೌಡ ರವರ ಮನೆಯ ಬಳಿ ಜನ ಸೇರಿದ್ದರು. ಸದರಿ ಸ್ಥಳಕ್ಕೆ ನಾನು ಹೋದೆನು. ಅಷ್ಟರಲ್ಲಿ ಯಾರೋ ಆ್ಯಂಬುಲೆನ್ಸ್‌ಗೆ ಫೋನ್ ಮಾಡಿದ್ದರು. ಸಿದ್ದೇಗೌಡ ರವರ ಹೆಂಡತಿ ಮಹದೇವಮ್ಮ ರವರನ್ನು, ಅವರ ಮಗ ಫ್ರಾಸಾ.1 ರವರು, ಅವರ ಮನೆಯಿಂದ ಹೊರಗೆ ಕರೆತರುತ್ತಿದ್ದರು. ಮಹದೇವಮ್ಮರವರಿಗೆ ಬೆಂಕಿ ಬಿದ್ದಿದೆ ಎಂದು ಅವರ ಮಗ, ಮನೆಯಿಂದ ಹೊರ ತರುತ್ತಿದ್ದರು ಮಹದೇವಮ್ಮವರಿಗೆ ಬಟ್ಟೆ ಹೊದಿಸಿದ್ದರು,

ಅವರ ದೇಹಕ್ಕೆ ಏನಾಗಿತ್ತು ಎಂದು ನನಗೆ ಗೊತ್ತಾಗಿಲ್ಲ. ಮಹದೇವಮ್ಮ ರವರನ್ನು ಆ್ಯಂಬುಲೆನ್ಸ್ ಗೆ ಹತ್ತಿಸಲು ನಾನು ಸಹಾಯ ಮಾಡಿರುತ್ತೇನೆ. ನಾನು, ಫ್ರಾಸಾ.1-ಸಿದ್ದರಾಜು ಮತ್ತು ಮಹದೇವಮ್ಮ, ಮಳವಳ್ಳಿಯ ಸರ್ಕಾರಿ ಆಸ್ಪತ್ರೆಗೆ ಆ್ಯಂಬುಲೆನ್ಸ್ ನಲ್ಲಿ ಹೋಗಿರುತ್ತೇವೆ. ಆ ಸಮಯದಲ್ಲಿ, ಮಹದೇವಮ್ಮ ರವರಿಗೆ ಏನಾಗಿತ್ತು ಎಂದು ನನಗೆ ತಿಳಿದು ಬಂದಿಲ್ಲ. ಸದರಿ ಸರ್ಕಾರಿ ಆಸ್ಪತ್ರೆಗೆ ಹೋದಾಗ, ವೈದ್ಯಾಧಿಕಾರಿಗಳು ಮಹದೇವಮ್ಮ ರವರನ್ನು ಆಸ್ಪತ್ರೆಯ ಒಳಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಸದರಿ ಆಸ್ಪತ್ರೆಯಿಂದ ನಾನು ಮನೆಗೆ ವಾಪಸ್ ಆಗಿರುತ್ತೇನೆ.

3. ಮಹದೇವಮ್ಮ ರವರು ತೀರಿಕೊಂಡರು ಎಂದು ಸುಮಾರು 1 ತಿಂಗಳ ನಂತರ ನನಗೆ ಗೊತ್ತಾಗಿರುತ್ತದೆ. ಫ್ರಾಸಾ.1 ರವರಿಗೆ ಏನಾಗಿತ್ತು ಎಂದು ಆ್ಯಂಬುಲೆನ್ಸ್ ನಲ್ಲಿ ಹೋಗುತ್ತಿದ್ದಾಗ ನನಗೆ ತಿಳಿದು ಬಂದಿಲ್ಲ. ಮಹದೇವಮ್ಮ ರವರು ಯಾವ ಕಾರಣದಿಂದ ತೀರಿಕೊಂಡರು ಎಂದು ನನಗೆ ತಿಳಿದಿಲ್ಲ.

4. ಆರೋಪಿಯ ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ತಿಳಿದಿಲ್ಲ. ಮಹದೇವಮ್ಮ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಮರುದಿನ ಪೊಲೀಸರು ಸಿದ್ದೇಗೌಡರವರ ಮನೆಯ ಬಳಿ ನನ್ನನ್ನು ವಿಚಾರಣೆ ಮಾಡಿದರು. ಆ ದಿನ ಸದರಿ ಪೊಲೀಸರು ಸಂಜೆ 4.00 ರಿಂದ 5.00 ಗಂಟೆ ತನಕ ಆರೋಪಿಯ ಮನೆ ಬಳಿ ಇದ್ದರು. ಸದರಿ ಸಮಯದಲ್ಲಿ ನಾನು, ಸ್ವಾಮಿ ಹಾಗೂ ನನ್ನ ಗಂಡ ಸಹ ಇದ್ದೆವು. ಪೊಲೀಸರು ಮಹಜರ್ ಮಾಡಿ, ಫೋಟೋ ತೆಗೆದುಕೊಂಡಿದ್ದರು. ಪೊಲೀಸರಿಗೆ ಸಿದ್ದೇಗೌಡರವರ ಮನೆಯನ್ನು ಯಾರು ತೋರಿಸಿದರೆಂದು ನನಗೆ ತಿಳಿದಿಲ್ಲ. ನಮ್ಮನ್ನು ಫೋನ್ ಮಾಡಿ ಸ್ಥಳಕ್ಕೆ ಕರೆಸಿದ್ದರು. ನಾನು, ಸ್ವಾಮಿ ಮತ್ತು ನನ್ನ ಗಂಡ ಸದರಿ ಮಹಜರ್ ಗೆ ಸಹಿ ಮಾಡಿದೆವು. ಸಾಕ್ಷಿಗೆ ನಿಪಿ.6 ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ.7 ಮತ್ತು 8 ಫೋಟೋಗಳನ್ನು ತೋರಿಸಲಾಗಿ, ಸದರಿ ಫೋಟೋಗಳಲ್ಲಿ, ತಾನು, ತನ್ನ ಗಂಡ ಮತ್ತು ಪೊಲೀಸರು ಇದ್ದೇವೆ ಎಂದು ಗುರುತಿಸಿರುತ್ತಾರೆ. ನಿಪಿ.7 ಮತ್ತು 8 ರಲ್ಲಿ ಚಡ್ಡಿಯನ್ನು ಹಾಕಿರುವ ವ್ಯಕ್ತಿ ಸ್ವಾಮಿ ಎಂದು ಸಾಕ್ಷಿಯು ಗುರುತಿಸಿರುತ್ತಾರೆ.

5. ಸದರಿ ನಿಪಿ.8 ರಲ್ಲಿ ಕಾಣಿಸುವ ಬಟ್ಟೆಗಳು ಸ್ಥಳದಲ್ಲಿ ಇದ್ದವು. ಸದರಿ ಬಟ್ಟೆಗಳು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಮಹಜರ್ ಮಾಡಬೇಕೆಂದು ಕರೆದಿದ್ದರಿಂದ ನಾನು ಆರೋಪಿ ಮನೆಗೆ ಹೋಗಿದ್ದೆನು.ಸದರಿ ಬಟ್ಟೆಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಸ್ಥಳದಲ್ಲಿ ಬೇರೆ ಏನು ಇದ್ದವೆಂದು ನನಗೆ ತಿಳಿದಿಲ್ಲ.
6. ಮಳವಳ್ಳಿ ನ್ಯಾಯಾಲಯದಲ್ಲಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಮಹದೇವಮ್ಮರವರು ತೀರಿಕೊಂಡ ನಂತರ ಯಾವಾಗ ಮಳವಳ್ಳಿ ನ್ಯಾಯಾಲಯಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದು ನನಗೆ ನೆನಪಿಲ್ಲ.
7. ಆರೋಪಿಯ ಮನೆಯಲ್ಲಿ ಪೊಲೀಸರು ವಶಪಡಿಸಿಕೊಂಡ ಬಟ್ಟೆಗಳನ್ನು ಗುರುತಿಸಲು ನನಗೆ ಸಾಧ್ಯವಿಲ್ಲ.
8. ಸದರಿ ಆರೋಪಿಯ ಮನೆ, ಹೊಸ ಮನೆಯಾಗಿರುತ್ತದೆ. ಸದರಿ ಘಟನೆಗಿಂತ 1 ವರ್ಷದ ಮೊದಲು ಸದರಿ ಮನೆಯನ್ನು ಕಟ್ಟಲಾಗಿತ್ತು. ಆರೋಪಿ ಸಿದ್ದೇಗೌಡವರು, ವ್ಯವಸಾಯ ಹಾಗೂ ಮೇಕೆ ಮೇಯಿಸುವ ಕೆಲಸ ಮಾಡುತ್ತಿದ್ದರು. ಆರೋಪಿಯ ಮಗ ಸಿದ್ದರಾಜು ಪ್ರಾಸಾ.1 ರವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಊರಿಗೆ ಬರುತ್ತಿದ್ದರು ಹಾಗೂ ಹೋಗುತ್ತಿದ್ದರು.

(ಮುದ್ದೆಮಾಲುಗಳನ್ನು ಹಾಜರಿಸದೇ ಇದ್ದುದರಿಂದ ಸಾಕ್ಷಿಯ ಮುಂದುವರೆದು ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ).

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.